ತಯಾರಿಸಿದ ನಂತರ ಇದರಿಂದ ನೀರಾವರಿ ಸೌಲಭ್ಯ ಪಡೆಯುವ ಹಳ್ಳಿಗಳನ್ನು ಗುರುತಿಸಬಹುದಾಗಿದೆ.

ಶಿರೂರು ಡ್ಯಾಮ್ ಸಲುವಾಗಿ ರಸ್ತೆ ಪೂರ್ಣಗೊಳಿಸುವ ಬಗ್ಗೆ

349 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇಲಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರೂರು ಡ್ಯಾಂ ಸಲುವಾಗಿ ಕಾಮಗಾರಿ ಪ್ರಾರಂಭಿಸಲು ರಸ್ತೆ ನಿರ್ಮಾಣ ಕಾರ್ಯ ಪ್ರಾರಂಭಿಸಿದ್ದನ್ನು ಅರಣ್ಯ ಇಲಾಖೆಯವರು ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನೀರಾವರಿ ಮತ್ತು ಅರಣ್ಯ ಇಲಾಖೆ ಮಧ್ಯೆ ಇರುವ ತಾರತಮ್ಯ ಸರಿಪಡಿಸಿ ಕಾಮಗಾರಿ ಪ್ರಾರಂಭಿಸಲು ಸರ್ಕಾರದವರು ಜರೂರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಬಂದಿದೆ.

ಆ) ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಕೊಟಬಾಗಿ ಏತ ನೀರಾವರಿ ಯೋಜನೆ.

348 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇಲಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊಟಬಾಗಿ ಏತ ನೀರಾವರಿ ಯೋಜನೆ ಮಂಜೂರು ಆಗಿದೆಯೆ;

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಈ ಯೋಜನೆಯಿಂದ ಹುಕ್ಕೇರಿ ತಾಲ್ಲೂಕಿನ ಯಾವ ಯಾವ ಹಳ್ಳಿಗಳ ಎಷ್ಟು ಎಷ್ಟು ಎಕರೆ ಜಮೀನುಗಳಿಗೆ ನೀರಿನ ಸೌಲಭ್ಯ ಕಲ್ಪಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಹುಕ್ಕೇರಿ ತಾಲ್ಲೂಕಿನ ಕೊಟಬಾಗಿ ಏತ ನೀರಾವರಿ ಯೋಜನೆಯನ್ನು, ಕೆಲ ನಿಬಂಧನೆಗಳೊಡನೆ, ಕೈಗೆತ್ತಿಕೊಳ್ಳಲು ಸರ್ಕಾರವು ದಿನಾಂಕ 31-10-92ರಂದು ಅನುಮೋದನೆ ನೀಡಿರುತ್ತದೆ.

ಆ) ಯೋಜನೆಗೆ ತಾಂತ್ರಿಕ ಸಮಿತಿಯ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಇ) ಹುಕ್ಕೇರಿ ತಾಲ್ಲೂಕಿನ 13 ಗ್ರಾಮಗಳು ಮತ್ತು ಚಿಕ್ಕೋಡಿ ತಾಲ್ಲೂಕಿನ 11 ಗ್ರಾಮಗಳು ಈ ಏತ ನೀರಾವರಿ ಯೋಜನೆಯಿಂದ ಪ್ರಯೋಜನ ಪಡೆಯುತ್ತವೆ. ಯೋಜನೆಯ ಅನ್ವೇಷಣಾ ಕಾರ್ಯವು ಪ್ರಗತಿಯಲ್ಲಿದ್ದು, ಅದು ಮುಗಿದ ನಂತರ ಪ್ರತಿಯೊಂದು ಗ್ರಾಮದಲ್ಲಿ ನೀರಾವರಿ ಸೌಲಭ್ಯ ಪಡೆಯುವ ವಿಸ್ತೀರ್ಣದ ವಿವರ ತಿಳಿದುಬರುತ್ತದೆ.

ತುಮಕೂರು ಉಪನಾಲೆಯ ಬಳಿ ಬಾಗೂರು ನವಿಲೆ ಸುರಂಗದಿಂದ ಈಚೆಗೆ ಲಭ್ಯವಾಗಿರುವ ನೀರಿನ ಪ್ರಮಾಣ.

663 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೇಮಾವತಿ ಎಡದಂಡೆ ಯೋಜನೆಯ ತುಮಕೂರು ಉಪ ನಾಲೆಯ ಬಳಿಯ ಬಾಗೂರು ನವಿಲೆ ಸುರಂಗದಿಂದ ಈಚೆಗೆ ಲಭ್ಯವಾಗುವ ನೀರಿನ ಪ್ರಮಾಣವೆಷ್ಟು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ಇದರಿಂದ ತುಮಕೂರು ಜಿಲ್ಲೆಯಲ್ಲಿ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರೆಯುತ್ತದೆ; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು);

ಇ) ಈಗಾಗಲೇ ನೀರು ಒದಗಿಸುತ್ತಿರುವ ಪ್ರದೇಶಗಳಿಗೆ ಯಾವ ತಾಂತ್ರಿಕ ಆಧಾರದ ಮೇಲೆ ಒಂದನ್ನು ಒದಗಿಸಲಾಗುತ್ತಿದೆ;

ಈ) ಇಂತಹ ಬೆಳೆಗೆ ಇಂತಿಷ್ಟು ನೀರನ್ನು ಒದಗಿಸಬೇಕೆಂದು ನಿಯಮವೇನಾದರೂ ರೂಪಿಸಲಾಗಿದೆಯೇ; ಹಾಗಿದ್ದಲ್ಲಿ, ಆ ನಿಯಮಗಳ ವಿವರಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ)

1) ನಾಗಮಂಗಲ ಉಪನಾಲೆ 870 ಕ್ಯೂಸೆಕ್ಸ್
2) ತುಮಕೂರು ಉಪ ನಾಲೆ 1445 ಕ್ಯೂಸೆಕ್ಸ್
3) ನವಿಲೆ ಏತ ನೀರಾವರಿ 55 ಕ್ಯೂಸೆಕ್ಸ್

ಒಟ್ಟು 2370 ಕ್ಯೂಸೆಕ್ಸ್

ಆ) ತುಮಕೂರು ಜಿಲ್ಲೆ

1) ತಿಪಟೂರು ತಾ: 24,120 ಎಕರೆಗಳು
2) ಗುಬ್ಬಿ 1,01,252 "
3) ಕುಣಿಗಲ್ 61,099 "
4) ತುರುವೇಕೆರೆ 1,17,464 "
5) ತುಮಕೂರು 17,000 "

ಒಟ್ಟು 3,20,935 ಎಕರೆಗಳು.

ಇ) ನಾಲಾ ಕೆಲಸಗಳು ಪ್ರಗತಿಯಲ್ಲಿರುವುದರಿಂದ ತುಮಕೂರು ಜಿಲ್ಲೆಯ ಪ್ರದೇಶಗಳಿಗೆ ನೀರನ್ನು ಒದಗಿಸಿಲ್ಲ.

ಈ) ನಿಯಮ ರೂಪಿಸಲಾಗಿದೆ. ಮೇಲ್ಕಂಡ ಪ್ರದೇಶವು ವಲಯದ ವ್ಯಾಪ್ತಿಯಲ್ಲಿ ಬರುವ ಅಚ್ಚುಕಟ್ಟು ಅರೆ ನೀರಾವರಿ ಬೆಳೆಗೆ ಸಿಮೀತವಾಗಿರುವುದರಿಂದ 120 ಎಕರೆಗೆ ಒಂದು ಕ್ಯೂಸೆಕ್ಸ್ ನೀರನ್ನು ಒದಗಿಸಬೇಕೆಂದು ನೀರಾವರಿ ನಿಯಮವಿರುತ್ತದೆ.

ಹೇಮಾವತಿ ಎಡದಂಡೆ ಯೋಜನೆಯನ್ನು ಪೂರ್ಣಗೊಳಿಸಲು ಒತ್ತಾಯ.

662 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಹೇಮಾವತಿ ಎಡದಂಡೆ ನಾಲಾ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?
2. ಇದಕ್ಕೆ ವರ್ಷವಾರು ಮೀಸಲಿಟ್ಟಿದ್ದ ಹಾಗೂ ವರ್ಷವಾರು ಖರ್ಚು ಮಾಡಿದ ಹಣದ ಪ್ರಮಾಣವೆಷ್ಟು?
3. ಈ ಯೋಜನೆಯು ಪೂರ್ಣಗೊಳ್ಳಲು ಅಗತ್ಯವಿರುವ ಕಾಲಾವದಿ ಎಷ್ಟು?
4. ಈ ಯೋಜನೆ ಪೂರ್ಣಗೊಂಡ ನಂತರ ತುಮಕೂರು ಜಿಲ್ಲೆಯಲ್ಲಿ ಎಷ್ಟು ಎಕರೆಗೆ ನೀರಾವರಿ ದೊರೆಯುತ್ತದೆ. (ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸುವುದು)
5. ಈ ಯೋಜನೆಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅಥವಾ ವಿಶ್ವಬ್ಯಾಂಕಿನ ನೆರವನ್ನೇನಾದರೂ ಪಡೆದಿದೆಯೇ?
6. ಪಡೆದಿದ್ದಲ್ಲಿ ಅದರ ಮೊತ್ತವೆಷ್ಟು?

ಶ್ರೀ ಎಸ್.ಎಂ. ಕೃಷ್ಣಾ (ಉಪ ಮುಖ್ಯ ಮಂತ್ರಿಗಳು) :